OS 296/2022
PW-1

ದಿನಾಂಕಃ31-10-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1,2,4,6 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ನನ್ನ ತಂದೆಯ ತಂದೆಯ ಹೆಸರು ಸಿದ್ದಪ್ಪ ಎಂದರೆ ಸರಿ. ಸದರಿ ಸಿದ್ದಪ್ಪ ಎಂಬ ನನ್ನ ಅಜ್ಜನಿಗೆ 4 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಸದರಿ 4 ಜನ ಗಂಡು ಮಕ್ಕಳಲ್ಲಿ ಮೊದಲನೆಯವರು ಬಿಷ್ಟಪ್ಪ , ಎರಡನೇಯವರು ಸಿದ್ದಲಿಂಗಪ್ಪ , ಮೂರನೇಯವರು ಹನುಮಂತಪ್ಪ , ನಾಲ್ಕನೆಯವರು ಹಾಲಪ್ಪ ಎಂದರೆ ಸರಿ. ಸದರಿ ಎರಡನೇಯವರಾದ ಸಿದ್ದಲಿಂಗಪ್ಪ ನನ್ನ ತಂದೆಯವರಿಗೆ 12 ಜನ ಮಕ್ಕಳು ಎಂದರೆ ಸರಿ. ಅವರಲ್ಲಿ 8 ಜನ ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು. ಸದರಿ ಹೆಣ್ಣುಮಕ್ಕಳಲ್ಲಿ ಹಾಲಮ್ಮ ಎನ್ನುವವರು ಅವಿವಾಹಿತರಾಗಿ ಮರಣಹೊಂದಿರುತ್ತಾರೆ ಎಂದರೆ ಸರಿ. ನಾನು ನನ್ನ ತಂದೆಗೆ 3 ನೇ ಮಗ, ಅನಂದಪ್ಪ 4 ನೇ ಮಗ, ಚಂದ್ರಪ್ಪ 5 ನೇ ಮಗ, ರವಿಕುಮಾರ 6 ನೇ ಮಗ, ಸುನಂದಮ್ಮ 7 ನೇಮಗಳು, ಹಾಲೇಶಪ್ಪ 8 ನೇ ಮಗ, ನಾಗರಾಜ 9 ನೇ ಯವರು, ಲೇಟ್ ಹಾಲಮ್ಮ 10 ನೇಯವರು, ಹನುಮಂತಪ್ಪ 11 ನೇ ಯವರು, ಬಿಷ್ಟಪ್ಪ 12 ನೇಯವರು.

ಈ ದಾವೆಯಲ್ಲಿ ರತ್ನಮ್ಮ ಮತ್ತು ಶಾರದಮ್ಮನವರು ನನ್ನ ಸಹೋದರಿಯರಾಗಿದ್ದು ಅವರು ವಿವಾಹಿತರಾಗಿ ಮೃತಪಟ್ಟಿದ್ದು, ಸದರಿಯವರ ವಾರಸುದಾರರನ್ನು ಪಕ್ಷಗಾರರಾಗಿ ಸೇರಿಸಿರುವುದಿಲ್ಲ, ಅದಕ್ಕೆ ಕಾರಣ ನನಗೆ ಗೊತ್ತಿಲ್ಲ. ಈ ದಾವೆಯನ್ನು ಪಾಲುವಿಭಾಗಕ್ಕಾಗಿ ಹೂಡಿರುತ್ತೇನೆ. ಈ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ಎಂ ಎ, ಬಿ.ಎಡ್ ಪದವೀಧರ. ನಾನು ಖಾಸಗಿ ಸಂಸ್ಥೆಯಲ್ಲಿ ಶಿಕ್ಷಕನಾಗಿ ಅರೆಕಾಲಿಕ ನೌಕರನಾಗಿ ಕೆಲಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕಃ 26-04-1959. ನಾನು ನನ್ನ ಸುಮಾರು 32 ವರ್ಷ ವಯಸ್ಸಿನಲ್ಲಿ ಊರನ್ನು ಬಿಟ್ಟು ಹೋಗಿರುತ್ತೇನೆ, ಅಂದರೆ 1991 ರಲ್ಲಿ ಊರನ್ನು ಬಿಟ್ಟಿರುತ್ತೇನೆ. ತದನಂತರ ನಾನು ನನ್ನ ಸ್ವಂತ ಊರಿಗೆ ಹಿಂದಿರುಗಲೇ ಇಲ್ಲ ಎಂದರೆ ಸಾಕ್ಷಿ ತಿಂಗಳಿಗೊಮ್ಮೆ 2 ತಿಂಗಳಿಗೊಮ್ಮೆ ಬಂದು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಅವಿವಾಹಿತ. ಈ ದಾವೆಯ 7 ನೇ ಪ್ರತಿವಾದಿಗೆ ಮಕ್ಕಳು ಇಲ್ಲ. ಈ ದಾವೆಯ 6 ನೇ ಪ್ರತಿವಾದಿಯಾದ ನನ್ನ ತಮ್ಮನಿಗೆ ವಿವಾಹವಾಗಿ ವಿಚ್ಛೇದನ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಗಂಡ ಮೃತಹೊಂದಿದ್ದು ಅವರಿಗೆ ಮಕ್ಕಳಿರುವುದಿಲ್ಲ. ನನ್ನ ತಂದೆ 2000 ನೇ ಸಾಲಿನಲ್ಲಿ ಮರಣಹೊಂದಿರುತ್ತಾರೆ.

ನನ್ನ ಅಜ್ಜನ ಆಸ್ತಿಯನ್ನು ಅವರ ವಾರಸುದಾರರಾದ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಪಾಲುವಿಭಾಗವಾಗಿತ್ತು ಎಂದರೆ ಸಾಕ್ಷಿ ಅರ್ಧ ಆಗಿದೆ ಅರ್ಧ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುವಿಭಾಗ ನೊಂದಾಯಿತವಾಗಿದ್ದು ಅದರ ದಾಖಲೆ ನನ್ನ ಬಳಿ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ತನ್ನ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳ ಪಟ್ಟಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಗಳ ಪಟ್ಟಿಯನ್ನು ನೋಡಿ ಪರಿಶೀಲಿಸಿ

ಸದರಿ ದಾಖಲೆಗಳಲ್ಲಿ ನೊಂದಾಯಿತ ಪಾಲುವಿಭಾಗಪತ್ರ ಇಲ್ಲದೆ ಇರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ನನ್ನ ತಂದೆ ಅವರ ಸಹೋದರರ ನಡುವೆ ಆದ ದಿಃ 12-05-1988 ರ SR No.293/1988-89 ರ ನೊಂದಾಯಿತ ಪಾಲು ವಿಭಾಗಪತ್ರವಾಗಿದ್ದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರಂತೆ 1 ನೇ ಷೆಡ್ಯೂಲ್‌ನ ಆಸ್ತಿಗಳು ನನ್ನ ದೊಡ್ಡಪ್ಪನಾದ ಬಿಷ್ಟಪ್ಪನವರ ಪಾಲಿಗೆ ಬಂದಿರುತ್ತದೆ, 2 ನೇ ಷೆಡ್ಯೂಲ್ ನ ಆಸ್ತಿ ನನ್ನ ತಂದೆಯ ಪಾಲಿಗೆ ಬಂದಿರುತ್ತದೆ, 3 ನೇ ಷೆಡ್ಯೂಲ್ ನನ್ನ ಚಿಕ್ಕಪ್ಪನಾದ ಹನುಮಂತಪ್ಪನ ಪಾಲಿಗೆ ಬಂದಿರುತ್ತದೆ. 4 ನೇ ಷೆಡ್ಯೂಲ್ ಆಸ್ತಿಗಳು ನನ್ನ ಚಿಕ್ಕಪ್ಪನಾದ ಹಾಲಪ್ಪನವರಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ದಾಖಲೆ ನೊಂದಾಯಿತವಾಗುವ ಕಾಲಕ್ಕೆ ನಾನು ಇದ್ದೆ. ನನ್ನ ತಂದೆಯ ಮನೆತನದಲ್ಲಿ ನಾನು ಒಬ್ಬನು ಮಾತ್ರ ಹೆಚ್ಚಿನ ವಿದ್ಯಾರ್ಹತೆ ಹೊಂದಿದಾತ ಎಂದರೆ ಸರಿ.

ನಿಡಿ-1 ನ್ನು ತಯಾರಿಸುವಾಗ ನಾನು ನೋಡಿಲ್ಲ. ಸದರಿ ನಿಡಿ-1 ರಂತೆ ಹಿಸ್ಸಾದಾರರು ತಮ್ಮತಮ್ಮಪಾಲಿಗೆ ಬಂದ ಹಿಸ್ಸಾ ಆಸ್ತಿಗಳಲ್ಲಿ ಸ್ವಾಧೀನಾನುಭವವನ್ನುಅದೇ ದಿನ ವಹಿಸಿಕೊಂಡರು ಎಂದರೆ ಸರಿ. ತದನಂತರ ನಿಡಿ-1 ರ ಆಧಾರದ ಮೇಲೆ ಸದರಿ ಹಿಸ್ಸಾದಾರರರ ಹೆಸರಿಗೆ ಖಾತೆಯು ಸಹ ಆಯಿತು ಎಂದರೆ ಸರಿ. ನಿಡಿ-1 ರಂತೆ ಹಂಚಿಕೆಯಾದ ಆಸ್ತಿಗಳ ಕುರಿತು ನನ್ನ ದೊಡ್ಡಪ್ಪ ಮತ್ತು ಚಿಕಜ್ಕಪ್ಪನದಿರಲ್ಲಿ ಇಲ್ಲಿಯವರೆಗೂ ಯಾವುದೇ ತಕರಾರು ಇರುದಿಲ್ಲ. ಎಂದರೆ ಸರಿ. ನಿಡಿ-1 ರಲ್ಲಿ ನಮೂದಿಸಿರುವಂತ ಆಸ್ತಿಗಳು ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿ. ಸದರಿ ನಿಡಿ-1 ರಲ್ಲಿ ನಮೂದಿಸಿರುವ ಆಸ್ತಿಗಳನ್ನು ಹೊರತುಪಡಿಸಿ ಸದರಿ ಸಮಯಕ್ಕೆ ಮತ್ಯಾವ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

ನನ್ನ ತಂದೆ ಜೀವಿತಾ ಕಾಲಾವಧಿಯಲ್ಲಿ ನಾನು ಜಂಟಿ ಕುಟುಂಬದಿಂದ ಹೊರಹೊಗಲು ಇಚ್ಚಿಸಿದ್ದು ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳಲ್ಲಿ ಪಾಲುವಿಭಾಗ ಮಾಡಿಕೊಡುವಂತೆ ನಾನು ಎಂದಿಗೂ ಬೇಡಿಕೆ ಇಟ್ಟಿಲ್ಲ. ನನ್ನ ಸಹೋದರರು ಸಹ ಯಾರು ಸಹ ಬೇಡಿಕೆ ಇಟ್ಟಿಲ್ಲ ಎಂದರೆ ಸಾಕ್ಷಿ 2012 ರಲ್ಲಿ ನನ್ನ ಸಹೋರದನಾದ 3 ನೇ ಪ್ರತಿವಾದಿ ರವಿಕುಮಾರ ಎನ್ನುವವನು ಹಿಸ್ಸಾ ಹಕ್ಕಿಗಾಗಿ ಚನ್ನಗಿರಿ ನ್ಯಾಯಲಯದಲ್ಲಿ ಅಸಲು ದಾವಾ ನಂ 80/2012 ರಂತೆ ಸಿವಿಲ್ ದಾವೆ ಹೂಡಿರುತ್ತಾನೆ. ಸದರಿ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಹಾಜರಾಗಿರುವುದಿಲ್ಲ. ತಕರಾರನ್ನು ಸಹ ಸಲ್ಲಿಸಿರುವುದಿಲ್ಲ. ಉಳಿದ ನನ್ನ ಸಹೋದರರು ತಕರಾರು ಹಾಕಿದ ಬಗ್ಗೆಯೂ ಸಹ ನನಗೆ ಗೊತ್ತಿಲ್ಲ.

ನಿಡಿ-1 ರಂತೆ ನನ್ನ ತಂದೆಯವರಿಗೆ 2 ನೇ ಷಡ್ಯೂಲ್ ನಲ್ಲಿ ನಮೂದಿಸಿರುವಂತೆ ಪಾಲುವಿಭಾಗ ಪತ್ರದಲ್ಲಿ 10 ಆಸ್ತಿಗಳು ನನ್ನ ತಂದೆಯ ಹಿಸ್ಸೆಗೆ ಬಂದಿದೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಜಂಜರ್ ನಂ 6 ಸರ್ವೆ ನಂ 31/4 ರಲ್ಲಿ 5 ಎಕರೆ ಜಮೀನಿನಲ್ಲಿ 1 ನೇ ಬಿಷ್ಟಪ್ಪ, 2 ನೇ ಸಿದ್ದಲಿಂಗಪ್ಪ 3 ನೇ ಹನುಮಂತಪ್ಪರವರಿಗೆ ಸಮನಾಗಿ ಪಾಲುವಿಭಾಗವಾಗಿರುತ್ತದೆ ಎಂದರೆ ಸರಿ. ಸದರಿ ನಿಡಿ-1 ರ ಜಂಜರ್ 8 ರ ಸರ್ವೆ ನಂ 33 ರ 3 ಎಕರೆ 7 ಗುಂಟೆ ಜಮೀನಿನಲ್ಲಿ ನನ್ನ ಅಜ್ಜ ಸಿದ್ದಪ್ಪನ ಎಲ್ಲಾ 4 ಜನ ಮಕ್ಕಳಿಗೆ ಸಮನಾಗಿ ಹಂಚಿಕೆಯಾಗಿದೆ ಎಂದರೆ ಸರಿ.

ನಿಡಿ-1 ರ ಜಂಜರ್ ನಂ 10 ಸರ್ವೆ ನಂ 71/5 ರಲ್ಲಿನ 2 ಎಕರೆ 26 ಗುಂಟೆ ಜಮೀನು ನನ್ನತಂದೆ ಮತ್ತು ನನ್ನಚಿಕ್ಕಪ್ಪ ಹನುಮಂತಪ್ಪನವರಿಗೆ ಸಮಭಾಗ ವಾಗಿ ಹಂಚಿಕೆಯಾಗಿದೆ ಎಂದರೆ ಸರಿ. ನಿಡಿ-1 ರ ಜಂಜರ್ ನಂ 7 ಸರ್ವೆ ನಂ 52 ರಲ್ಲಿನ 3 ಎಕರೆ 11 ಗುಂಟೆ ಜಮೀನಿನಲ್ಲಿ 1 ನೇ ಬಿಷ್ಟಪ್ಪ, 2 ನೇ ಸಿದ್ದಲಿಂಗಪ್ಪ 3 ನೇ ಹನುಮಂತಪ್ಪರವರಿಗೆ ಸಮನಾಗಿ ಪಾಲುವಿಭಾಗವಾಗಿರುತ್ತದೆ ಎಂದರೆ ಸರಿ.

ನಿಡಿ-1 ರಲ್ಲಿ ನಮೂದಾದ ಹಂಚಿಕೆಯಾದ ಆಸ್ತಿಗಳನ್ನು ಹೊರತುಪಡಿಸಿ ನನ್ನಅಜ್ಜ ಸಿದ್ದಪ್ಪನವರಿಗೆ ಬೇರೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ಹಾಗಾಗಿ ನಿಡಿ-1 ಪ್ರಕಾರ ನಮ್ಮ ಕುಟುಂಬದ ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಸ್ವತ್ತುಗಳು ಈಗಾಗಲೇ ಪಾಲುವಿಭಾಗಕ್ಕೆ ಒಳಪಟ್ಟಿದ್ದು ಬೇರೆ ಯಾವುದೇ ಸ್ವತ್ತುಗಳು ಹಂಚಿಕೆಗೆ ಬಾಕಿ ಉಳಿದಿಲ್ಲ ಎಂದರೆ ಸರಿ.

(ಪಾರ್ಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.